ಮುಂದೆ ಸಾಗುತ್ತ ಅವರು ಕ್ಯೆಂಪ್ಟಿ ಫಾಲ್‌ನ ಸಮೀಪಕ್ಕೆ ಬಂದಿದ್ದರು. ಮುಗಿಲಿನತ್ತ ನೋಡುತ್ತ ವೀರೇಂದ್ರ, 'ನೋಡು ಗೆಳೆಯಾ, ಪಾಪ ಆ ಚಂದ್ರ ಲಕ್ಷಾವಧಿ ನಕ್ಷತ್ರಗಳ ನಡುವೆ ಇದ್ದರೂ ಎಷ್ಟೊಂದು ಏಕಾಂಗಿಯಾಗಿದ್ದಾನೆ...' ಎಂದಿದ್ದ.

'ಹುಂ... ಮನುಷ್ಯರಂತೆಯೇ! ಲೋಕದ ಜಾತ್ರೆಯಲ್ಲಿ ಒಂಟಿ, ತೀರ ವಿರಾಗಿ. ಆ ಜನಜಂಗುಳಿಯ ಸಂತೆಯಲೊಂದು ಮಗು ಕಳೆದುಕೊಂಡಂತೆ. ಸಾವಿರಾರು ಜನ ಸುತ್ತುಮುತ್ತಲಿದ್ದರೂ ಅವರಲ್ಲಿ ಯಾರೂ ತನ್ನವರಿಲ್ಲ...' ಸರ್ಫರಾಜ್‌ನ ಮನಸ್ಸಿನ ಮೇಲೆ ಕವಿಯೊಬ್ಬನ ಭೂತ ಸವಾರಿ ಮಾಡಿತ್ತು.

ಗೆಳೆಯನ ಉದಾಸೀನ ಸ್ವರ ಕೇಳಿ ವೀರೇಂದ್ರ, 'ಲೋ, ನೀನೇಕೆ ಅಷ್ಟೊಂದು ಯೋಚಿಸುತ್ತಿಯೋ?' ಎನ್ನುತ್ತ ಅವನ ಬೆರಳುಗಳಲ್ಲಿ ತನ್ನ ಬೆರಳುಗಳನ್ನು ಸೇರಿಸಿ 'ನೀನು ಒಂಟಿಯಾಗಿರುವೆಯೋ ಅಥವಾ ಜಂಟಿಯಾಗಿರುವೆಯೋ? ನಿನಗೂ ಯಾರಾದರೂ ಸಹಯಾತ್ರಿ ಇದ್ದಿರಬೇಕು?' ಎಂದು ಆತ್ಮೀಯವಾಗಿ ಕೇಳಿದ್ದ.

ಬಹಳ ಹೊತ್ತಿನವರೆಗೆ ಇಬ್ಬರಲ್ಲಿ ಯಾರೂ ಮೌನ ಮುರಿಯಲಿಲ್ಲ. ಹುಣ್ಣಿಮೆಯ ಚಂದ್ರನನ್ನು ಇಬ್ಬರೂ ಸಮಚಿತ್ತದಿಂದ ನೋಡುತ್ತ ನಿಂತಿದ್ದರು. ಮರಳುವ ಹೊತ್ತಿಗೆ ಸರ್ಫರಾಜ್, 'ಅಲ್ಲಾಹನಲ್ಲಿ ನಾನು ಬೇಡುವುದೊಂದೇ... ಯಾವಾಗಲಾದರೂ ನಮ್ಮ ಪೋಸ್ಟಿಂಗ್ ಆದರೆ ನಾವಿಬ್ಬರೂ ಜೊತೆಗಿರುವಂತೆ ಆಗಬೇಕು...' ಎಂದಿದ್ದ.

ಇಂದು ಇಂಥ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಮತ್ತೆ ವೀರೇಂದ್ರನ ನೆನಪು ಇಷ್ಟೇಕೆ ಬರುತ್ತಿದೆ? ಎಂದು ಯೋಚಿಸುತ್ತಿರುವಾಗ ಯಾವಾಗ ನಿದ್ರೆ ಅವರ ಕಣ್ಣುಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿತ್ತೊ?

'ಸಾ...ಬ್, ಚಹಾ ಸಿದ್ಧವಾಗಿದೆ' ರಾತ್ರಿ ಸುಮಾರು ಮೂರು ಗಂಟೆಯ ಹೊತ್ತಿಗೆ ಅವರನ್ನು ಎಬ್ಬಿಸಿದ. ಕೂಡಲೇ ಎದ್ದು ಕುಳಿತರು. ಏನೋ ತರಾತುರಿಯಲ್ಲಿರುವಂತೆ ಬೇಗ ಸಿದ್ಧರಾಗಿ ಚಹಾ ಕುಡಿದು ಹೊರಟು ಬಿಟ್ಟರು.

ಬೆಟ್ಟದ ಇಳಿಜಾರಿನಲ್ಲಿ ಮೃದುವಾದ ಹಿಮಪಾತವಾಗಿತ್ತು. ಹೆಜ್ಜೆಗಳೊಂದಿಗೆ ಹಿಮ ಪುಡಿ ಪುಡಿಯಾಗುತ್ತಿದ್ದರಿಂದ ಬೂಟುಗಳೊಂದಿಗೆ ಚರ್‍ರ್ ಮರ್‍ರ್ ಎಂಬ ಮಂದ ಸದ್ದು ಹೊರಡುತ್ತಿತ್ತು. ಬೇಟೆನರಿಗಳಂತೆ ಸೈನಿಕರ ದಂಡು ಮುಂದೆ ಮುಂದೆ ನುಗ್ಗುತ್ತಿತ್ತು. ಈಚೆಯವರಿಗಾಗಲಿ ಆಚೆಯವರಿಗಾಗಲಿ... ಏಕೆ ಯುದ್ಧ ಮಾಡಲಾಗುತ್ತಿದೆ? ಯುದ್ಧದಿಂದ ಈಚೆಯ ಆಚೆಯ ಜನರಿಗೆ ಏನೇನು ದೊರೆಯಲಿದೆ? ಈ ಯುದ್ಧದಿಂದ ಚೀಡ, ದೇವದಾರು ವೃಕ್ಷಗಳಿಗೆ ಮತ್ತೆ ಒಂದಾದರೂ ಹೊಸ ಚಿಗುರೆಲೆ ಹುಟ್ಟಿಕೊಳ್ಳಲಿದೆಯೇ? ಅಥವಾ ಯುದ್ಧದಿಂದ ಹೊಲದಲ್ಲಿಯ ಫಸಲು ಇನ್ನಷ್ಟು ಹೆಚ್ಚಾಗಿ ಬೆಳೆಯುತ್ತದೆಯೇ? ಇದರಿಂದ ಸಿಂಧೂ, ಝೇಲಂ ಹಾಗೂ ಸಟ್ಲೆಜ್ ನದಿಗಳ ನೀರು ಮಾವಿನರಸವಾಗಿ ಮಾರ್ಪಡುತ್ತದೆಯೇ? ಯಾವುದೂ ಇಲ್ಲಿ ಯಾರಿಗೂ ತಿಳಿದಿಲ್ಲ.

ಗಡಿ ನಿಯಂತ್ರಣ ರೇಖೆಯಿಂದಾಚೆ ಬೆಟ್ಟದ ಇಳಿಜಾರಿನಲ್ಲಿ ಇಡೀ ಬಟಾಲಿಯನ್ ಸನ್ನದ್ಧವಾಗಿ ನಿಂತುಕೊಂಡಿತು. ಮೋರ್ಟಾರ್‌ನ ತೋಪುಗಳು ಬೆಂಕಿ ಕಾರಿಕೊಳ್ಳಲಾರಂಭಿಸಿದವು. ಎಲ್. ಎಮ್.ಜಿ. ಮಶಿನ್‌ಗನ್‌ಗಳ ಮರೆಯಲ್ಲಿ ಅವರು ಅಡಿ ಅಡಿಯಾಗಿ ಮುಂದೆ ಸಾಗತೊಡಗಿದರು. ಅತ್ತ ಇಂಡಿಯಾದ ಸೈನ್ಯದಿಂದಲೂ ಪ್ರಖರವಾದ ಪ್ರತ್ಯುತ್ತರ ದೊರೆಯಲಾರಂಭಿಸಿತು.

ಎರಡೂ ಕಡೆಯ ಸೈನಿಕರು ದಿಗ್ಭ್ರಾಂತರಂತೆ ಓಡಾಡಲಾರಂಭಿಸಿದ್ದರು. ಕೆಲವರ ಮೊಳಕೈಗಳು ನೆಲದೊಂದಿಗೆ ಘರ್ಷಿಸುತ್ತಿದ್ದವು. ಅವರ ಕೈಯಲ್ಲಿದ್ದ ಉಕ್ಕಿನ ನಳಿಕೆಯಿಂದ ಥಾಡ್... ಥಾಡ್... ಎಂದು ಹೊರಬೀಳುತ್ತಿದ್ದ ಅಗ್ನಿಯಾಶ್ವಗಳ ಉನ್ಮಾದ ಭರಿತ ಗುಂಪುಗಳು ಬೆಳಕಿನಷ್ಟು ವೇಗವಾಗಿ ಚಲಿಸುತ್ತಿದ್ದವು, ಗುರುತು ಪರಿಚಯವಿಲ್ಲದ ಶತ್ರುವಿನ ಜೀವ ತೆಗೆಯಲೆಂದು.